

# ಸೌಂದರ್ಯವರ್ಧಕ ಕಂದು ಸಕ್ಕರೆ

ಕಂದು ಸಕ್ಕರೆ ಬರೀ ಸಿಹಿತಿಂಡಿಗಳ ರುಚಿ ಹೆಚ್ಚಿಸುವ ರುಚಿವರ್ಧಕ ಮಾತ್ರವಲ್ಲ; ಇದೊಂದು ಉತ್ತಮ ಸೌಂದರ್ಯವರ್ಧಕವೂ ಹೌದು. ಕಂದು ಸಕ್ಕರೆ ಬಳಸಿ ಹೇರ್‌ಪ್ಯಾಕ್, ಫೇಸ್‌ಪ್ಯಾಕ್, ತ್ವಚೆಯ ಸಂರಕ್ಷಣೆಯನ್ನೂ ಮಾಡಿಕೊಳ್ಳಬಹುದು.

★ ಶಾರದಾ ಪಿ.ಬಿ.

ಸಿಹಿ ತಿಂಡಿಗಳಲ್ಲಿ ಕಂದು ಸಕ್ಕರೆಯನ್ನು ಬಳಸುವುದು ಎಲ್ಲರಿಗೂ ಗೊತ್ತಿರುವ ವಿಷಯ. ತಿಂಡಿ ತಿನಿಸುಗಳ ರುಚಿಯನ್ನು ಹೆಚ್ಚಿಸುವ ಈ ಸಕ್ಕರೆ ನಮ್ಮ ಚೆಲುವನ್ನು ಕೂಡ ವೃದ್ಧಿಸುತ್ತದೆ.
ಕಾರ್ಬೋಹೈಡ್ರೇಟ್ ಜೊತೆ ಕ್ಯಾಲ್ಶಿಯಂ, ಕಬ್ಬಿಣ, ತಾಮ್ರ, ಪೊಟಾಶಿಯಂ ಮತ್ತು ರಂಜಕದಂತಹ ಖನಿಜಗಳನ್ನು ಹೊಂದಿರುವ ಕಂದು ಸಕ್ಕರೆ ಚರ್ಮದ ಕಾಂತಿ ಹಾಗೂ ಕೇಶರಾಶಿಯ ಸೊಬಗನ್ನು ದುಪ್ಪಟ್ಟುಗೊಳಿಸುವುದು. ಇದರ ವಿಶೇಷ ಗುಣ ಎಂದರೆ ಇದರ ಮೃದುತ್ವ. ಎಲ್ಲ ರೀತಿಯ ಚರ್ಮದವರಿಗೂ ಇದು ಉಪಯುಕ್ತ.

## ತಲೆ ತುರಿಕೆಗೆ ಸಕ್ಕರೆ ಹೇರ್ ಪ್ಯಾಕ್

ನೆತ್ತಿಯ ಚರ್ಮ ತೇವ ಕಳೆದುಕೊಂಡಾಗ, ಹೊಟ್ಟು ಮತ್ತು ಹೇನಿನ ಸಮಸ್ಯೆ ಇದ್ದಾಗ ಅಥವಾ ಗಡಸು ಶ್ಯಾಂಪು, ಕಂಡೀಷನರ್ ಬಳಕೆಯಿಂದ ನೆತ್ತಿಯಲ್ಲಿ ತುರಿಕೆ ಉಂಟಾಗುತ್ತದೆ. ಆಗ ಕೂದಲು ಉದುರುವ ಸಾಧ್ಯತೆ ಹೆಚ್ಚು.

3–4 ಟೇಬಲ್ ಚಮಚ ಸಕ್ಕರೆಯೊಂದಿಗೆ 3–4 ಚಮಚ ಜೊಜೋಬ ಎಣ್ಣೆ ಸೇರಿಸಿ ಕೂದಲಿಗೆ ಮಾಲೀಶು ಮಾಡಿ 15–20 ನಿಮಿಷ ಬಿಡಿ. ಬಳಿಕ ಮೈಲ್ಡ್ ಶ್ಯಾಂಪು ಬಳಸಿ ಉಗುರು ಬೆಚ್ಚಗಿನ ನೀರಿನಿಂದ ತಲೆ ತೊಳೆಯಿರಿ. ಸಕ್ಕರೆಯು ನೆತ್ತಿಯ ರಂಧ್ರಗಳಲ್ಲಿ ಸೇರಿಕೊಂಡಿರುವ ಮಣ್ಣು ಹಾಗೂ ಕಸವನ್ನು ಹೊರತೆಗೆದು ನೆತ್ತಿಯ ಚರ್ಮವನ್ನು ಶುಭ್ರಗೊಳಿಸುತ್ತದೆ ಮತ್ತು ಜೊಜೋಬ ಎಣ್ಣೆ ನೆತ್ತಿಯ ತೇವಾಂಶ ವೃದ್ಧಿಸಿ ಚರ್ಮ ಒಣಗದಂತೆ ಕಾಪಾಡುತ್ತದೆ.

ಹೇನುಗಳಿಂದ ತಲೆ ತುರಿಕೆ ಹೆಚ್ಚಾದಾಗ 4 ದೊಡ್ಡ ಚಮಚ